**<u>ಮೇ಼ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,</u>**
**<u>ಮುಧೋಳ</u>**

C.C.No.959/2011
CW11/PW7

| | |
|---|---|
| ಹೆಸರು | ಸುಜಾತಾ ತರತರಿ |
| ಗಂಡನ ಹೆಸರು | ಸಂತೋಷ |
| ವಯಸ್ಸು | 42 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಮುಧೋಳ. |

**ದಿನಾಂಕಃ 29-10-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ ಃ- ಎ.ಪಿ.ಪಿ ರವರಿಂದ.</u>**

ಚಾಸಾ-1 ನನ್ನ ಗಂಡ. ಚಾಸಾ-12 ನನ್ನ ಗಂಡನ ಸಹೋದರ ಮತ್ತು ಚಾಸಾ-10 ನನ್ನ ಗಂಡನ ಸಹೋದರಿ.

ಚಾಸಾ-10 ರವರು ಧಾರವಾಡದಲ್ಲಿ ಇರುತ್ತಿದ್ದರು ಮತ್ತು ನಾವೆಲ್ಲರೂ ಕೂಡಿಕೊಂಡು ಕುಕ್ಕೆ ಸುಬ್ರಮಣ್ಯೆ ದೇವರಿಗೆ ಹೋಗವವರು ಇದ್ದಿದ್ದರಿಂದ ಚಾಸಾ-10 ರವರನ್ನು ನಾವು ಧಾರವಾಡದಿಂದ ದಿನಾಂಕ 21-12-2010 ರಂದು ಕರೆಸಿದ್ದೆವು. ನಾವು ಮಾರುಕಟ್ಟೆಗೆ ಹೋಗಿ ಸಾಯಂಕಾಲ 7-00 ಗಂಟೆ ಸುಮಾರಿಗೆ ಮನೆಗೆ ಮರಳಿ ಬರುತ್ತಿರುವಾಗ ಮಲ್ಲಮ್ಮನ ಗುಡಿಯ ಹತ್ತಿರ ನಮ್ಮ ಎದುರುಗಡೆಯಿಂದ ಒಂದು ಮೋಟಾರ ಸೈಕಲ ಮೇಲಿಂದ ಇಬ್ಬರು ವ್ಯಕ್ತಿಗಳು ಬಂದು ಚಾಸಾ-10 ರವರ ಕೊರಳಲ್ಲಿನ ಬಂಗಾರದ ಮಂಗಳಸೂತ್ರವನ್ನು ಕಿತ್ತುಕೊಂಡು ಮೋಟಾರ ಸೈಕಲ ಮೇಲಿಂದ ಓಡಿ ಹೊದರು. ನಂತರ ಸದರಿ ವಿಷಯವನ್ನು ನಾವು ಫೋನ ಮುಖಾಂತರ ನನ್ನ ಗಂಡನಾದ ಚಾಸಾ-1 ಮತ್ತು ನನ್ನ ಮೈದುನನಾದ ಚಾಸಾ-12 ರವರಿಗೆ ತಿಳಿಸಿದೆವು. ನಂತರ ಚಾಸಾ-1 ಮತ್ತು 12 ರವರು ಘಟನಾ ಸ್ಥಳಕ್ಕೆ ಬಂದ ನಂತರ ಸದರಿ ವಿಷಯವನ್ನು ನಾವು ಅವರಿಗೆ ತಿಳಿಸಿದೆವು. ನಂತರ ಅವರು ಪೋಲಿಸ ಠಾಣೆಗೆ ಹೊದರು. ಸದರಿ ಘಟನೆಯ ಕುರಿತು ಚಾಸಾ-1 ರವರು ಪಿರ್ಯಾದಿಯನ್ನು ನೀಡಿರುತ್ತಾರೆ.

ಪಿರ್ಯಾದಿಯನ್ನು ಕೊಟ್ಟ ಒಂದು ವಾರದ ನಂತರ ಚಾಸಾ-10 ರವರ ಕೊರಳದಲ್ಲಿಂದ ಮಂಗಳ ಸೂತ್ರವನ್ನು ಕಿತ್ತುಕೊಂಡು ಹೋದ ಆರೋಪಿತರು ಸಿಕ್ಕಿರುತ್ತಾರೆ ಎಂದು ನನಗೆ ಚಾಸಾ-1 ರವರು ಹೇಳಿದರು. ನಂತರ ಚಾಸಾ-10 ರವರ ಕೊರಳದಲ್ಲಿಂದ ಬಂಗಾರದ ಮಂಗಳ ಸೂತ್ರವನ್ನು ವ್ಯಕ್ತಿಗಳ ಹೆಸರು ಕಾಡಯ್ಯ ಪೂಜಾರಿ ಮತ್ತು ಈರಯ್ಯ ಮಠಪತಿ ಅಂತಾ ನನಗೆ ತಿಳಿದುಬಂದಿರುತ್ತದೆ.

ಚಾಸಾ-10 ರವರ ಕೊರಳಲ್ಲಿನ ಬಂಗಾರದ ಮಂಗಳ ಸೂತ್ರವನ್ನು ಕಿತ್ತುಕೊಂಡು ಹೋದ ಆರೋಪಿತರ ಪೈಕಿ ಈಗ ಒಬ್ಬ ಆರೋಪಿತನು ನ್ಯಾಯಾಲಯದ ಮುಂದೆ ಇರುತ್ತಾನೆ. ನಿಪಿ-10 ಮತ್ತು 11 ರಲ್ಲಿ ಕಾಣುವ ಮಂಗಳ ಸೂತ್ರ ಘಟನೆಯ ದಿನ ನನ್ನ ಕೊರಳಲ್ಲಿಂದ ಕಿತ್ತುಕೊಂಡು ಹೋದ ಮಂಗಳಸೂತ್ರ ಆಗಿರುತ್ತದೆ.

**<u>ಪಾಟೀ ಸವಾಲು :- ಆರೋಪಿ ನಂ.1 ರವರ ಪರ ಶ್ರೀ ಎಸ್.ಸಿ.ಯು ವಕೀಲರಿಂದ.</u>**

ಚಾಸಾ-10 ರವರು ಧಾರವಾಡದಿಂದ ಮುಧೋಳಕ್ಕೆ ಮಧ್ಯಾಹ್ನ ಬಂದಿದ್ದರು. ನಾನು ಮತ್ತು ಚಾಸಾ-10 ರವರು ಸಾಯಂಕಾಲ 5-00 ಗಂಟೆಗೆ ಮಾರುಕಟ್ಟೆಗೆ ಹೋಗಿದ್ದೇವು. ನಾವು ಆ ದಿನ ಪಾರ್ಲರಗೆ ಹೋಗಿದ್ದೇವು. ಸದರಿ ಪಾರ್ಲರ್ ಮಲ್ಲಮ್ಮನ ಗುಡಿಯ ಮುಂದೆ ಇರುತ್ತದೆ. ನಾವು ಮರಳಿ ಮನೆಗೆ ಹೋಗುತ್ತಿದ್ದಾಗ ಸಾಯಂಕಾಲ 7-00 ಗಂಟೆ ಆಗಿತ್ತು. ಮಲ್ಲಮ್ಮನ ಗುಡಿಯು ಹತ್ತಿರ ಸಾಯಂಕಾಲ ಎಲ್ಲರೂ ಅಡ್ಡಾಡುತ್ತಾರೆ ಎಂದರೆ ಸರಿ. ಚಾಸಾ-10 ರವರ ಕೊರಳಲ್ಲಿಂದ ಮಂಗಳಸೂತ್ರವನ್ನು ಕಿತ್ತುಕೊಂಡು ವ್ಯಕ್ತಿಗಳನ್ನು ನಾನು ಆ ಸಮಯದಲ್ಲಿ ನೋಡಿರಲಿಲ್ಲ ಎಂದರೆ ಸರಿ. ನಾನು ಮೋಟಾರ ಸೈಕಲ ನಂಬರನ್ನು ಸಹ ನೋಡಿರಲಿಲ್ಲ ಎಂದರೆ ಸರಿ. ಆರೋಪಿತರು ಇವರೇ ಇರುತ್ತಾರೆ ಎಂದು ಪೋಲಿಸರು ಚಾಸಾ-1 ರವರಿಗೆ ಹೇಳಿದ್ದರ ಮೇರೆಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಪಿರ್ಯಾದಿಯನ್ನು ದಿನಾಂಕ 21-12-2010 ರಂದು ಚಾಸಾ-1 ರವರು ನೀಡಿರುತ್ತಾರೆ. ಆ ದಿನ ನಾನು ಪೋಲಿಸ ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿ.

ಚಾಸಾ-10 ರವರು ಧಾರವಾಡದಲ್ಲಿ ಇರುತ್ತಿದ್ದರು ಮತ್ತು ನಾವೆಲ್ಲರೂ ಕೂಡಿಕೊಂಡು ಕುಕ್ಕೆ ಸುಬ್ರಮಣ್ಯೆ ದೇವರಿಗೆ ಹೋಗವವರು ಇದ್ದಿದ್ದರಿಂದ ಚಾಸಾ-10 ರವರನ್ನು ನಾವು ಧಾರವಾಡದಿಂದ ದಿನಾಂಕ 21-12-2010 ರಂದು ಕರೆಸಿದ್ದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮಾರುಕಟ್ಟೆಗೆ ಹೋಗಿ ಸಾಯಂಕಾಲ 7-00 ಗಂಟೆ ಸುಮಾರಿಗೆ ಮನೆಗೆ ಮರಳಿ ಬರುತ್ತಿರುವಾಗ ಮಲ್ಲಮ್ಮನ ಗುಡಿಯ ಹತ್ತಿರ ನಮ್ಮ ಎದುರುಗಡೆಯಿಂದ ಒಂದು ಮೋಟಾರ ಸೈಕಲ ಮೇಲಿಂದ ಇಬ್ಬರು ವ್ಯಕ್ತಿಗಳು ಬಂದು ಚಾಸಾ-10 ರವರ ಕೊರಳಲ್ಲಿನ ಬಂಗಾರದ ಮಂಗಳಸೂತ್ರವನ್ನು ಕಿತ್ತುಕೊಂಡು ಮೋಟಾರ ಸೈಕಲ ಮೇಲಿಂದ ಓಡಿ ಹೊದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ವಿಷಯವನ್ನು ನಾವು ಪೋನ ಮುಖಾಂತರ ನನ್ನ ಗಂಡನಾದ ಚಾಸಾ-1 ಮತ್ತು ನನ್ನ ಮೈದುನನಾದ ಚಾಸಾ-12 ರವರಿಗೆ ತಿಳಿಸಿದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-1 ಮತ್ತು 12 ರವರು ಘಟನಾ ಸ್ಥಳಕ್ಕೆ ಬಂದ ನಂತರ ಸದರಿ ವಿಷಯವನ್ನು ನಾವು ಅವರಿಗೆ ತಿಳಿಸಿದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಅವರು ಪೋಲಿಸ ಠಾಣೆಗೆ ಹೊದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಯ ಕುರಿತು ಚಾಸಾ-1 ರವರು ಪಿರ್ಯಾದಿಯನ್ನು ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದಿಯನ್ನು ಕೊಟ್ಟ ಒಂದು ವಾರದ ನಂತರ ಚಾಸಾ-10 ರವರ ಕೊರಳದಲ್ಲಿಂದ ಮಂಗಳ ಸೂತ್ರವನ್ನು ಕಿತ್ತುಕೊಂಡು ಹೋದ ಆರೋಪಿತರು ಸಿಕ್ಕಿರುತ್ತಾರೆ ಎಂದು ನನಗೆ ಚಾಸಾ-1 ರವರು ಹೇಳಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-10 ರವರ ಕೊರಳದಲ್ಲಿಂದ ಬಂಗಾರದ ಮಂಗಳ ಸೂತ್ರವನ್ನು ವ್ಯಕ್ತಿಗಳ ಹೆಸರು ಕಾಡಯ್ಯ ಪೂಜಾರಿ ಮತ್ತು ಈರಯ್ಯ ಮಠಪತಿ ಅಂತಾ ನನಗೆ ತಿಳಿದುಬಂದಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-10 ರವರ ಕೊರಳಲ್ಲಿನ ಬಂಗಾರದ ಮಂಗಳ ಸೂತ್ರವನ್ನು ಕಿತ್ತುಕೊಂಡು ಹೋದ ಆರೋಪಿತರ ಪೈಕಿ ಈಗ ಒಬ್ಬ ಆರೋಪಿತನು ನ್ಯಾಯಾಲಯದ ಮುಂದೆ ಇರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರಲ್ಲಿ ಕಾಣುವ ಮಂಗಳ ಸೂತ್ರ ಘಟನೆಯ ದಿನ ನನ್ನ ಕೊರಳಲ್ಲಿಂದ ಕಿತ್ತುಕೊಂಡು ಹೋದ ಮಂಗಳಸೂತ್ರ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.01.03 11:00:36 +0530